# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ - 02.08.2024

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ರಾಜೇಶ್ . ಎಸ್ | ಫ್ರಾ.ಸಾ. | - | 19 |
| ತಂದೆಯ ಹೆಸರು | - | ಸತ್ಯಪ್ಪ ಎನ್ | ಚಾ.ಸಾ. | - | 24 |
| ವಯಸ್ಸು | - | 34 ವರ್ಷ | | | |
| ಉದ್ಯೋಗ | - | ಪಿ ಸಿ ಲೋಕಾಯುಕ್ತ ಪೋಲೀಸ್ ಠಾಣೆ, ಚಿತ್ರದುರ್ಗ | | | |
| ವಾಸ ಸ್ಥಳ | - | ಚಿತ್ರದುರ್ಗ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

ನಾನು 2014 ರಿಂದ 2020 ರವರೆಗೆ ಚಿತ್ರದುರ್ಗದ ಡಿವೈ.ಎಸ್.ಪಿ. ಕಚೇರಿಯಲ್ಲಿ ಪಿಸಿ ಆಗಿ ಕೆಲಸ ಮಾಡಿದ್ದೇನೆ .

ದಿಃ 13.08.2020 ರಂದು ನಾನು ಕಚೇರಿಯಲ್ಲಿ ಇರುವಾಗ ಚಾಸಾ -26 ಇವರು ಇದ್ದು ಚಾಸಾ -4 ಹಾಜರುಪಡಿಸಿದ ಪೆನ್ ಡ್ರೈವ್ ನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿದ್ದು ಆ ಸಮಯದಲ್ಲಿ ಚಾಸಾ -26 ನನಗೆ ಫೋಟೋ ತೆಗೆಯಲು ಹೇಳಿದ್ದು ನಾನು ಇಲಾಖಾ ಕ್ಯಾಮಾರಾ ಮುಖಾಂತರ ಫೋಟೋ ತೆಗೆದಿರುತ್ತೇನೆ . ನಂತರ ಸದರಿ ಫೋಟೋಗಳನ್ನು ಗಣಕಯಂತ್ರದಲ್ಲಿ ಅಳವಡಿಸಿಕೊಂಡು ನಂತರ ಅವುಗಳನ್ನು ಖಾಸಗಿ ಲ್ಯಾಬ್ ನಲ್ಲಿ ಪ್ರಿಂಟ್ ಹಾಕಿಸಿ ಫೋಟೋಗಳನ್ನು ಚಾಸಾ -26 ಇವರಿಗೆ ಕೊಟ್ಟಿರುತ್ತೇನೆ . ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನಿಪಿ -10 , 11 ರ ಫೋಟೋವನ್ನು ನೋಡಿ

ಗುರುತಿಸಿರುತ್ತಾರೆ . ಈ ಬಗ್ಗೆ ನಾನು ವರದಿ ನೀಡಿರುತ್ತೇನೆ . ಸಾಕ್ಷಿ ಸದರಿ ವರದಿ ನೋಡಿ ತನ್ನ ಸಹಿ ಗುರುತಿಸಿದ್ದು ಅದನ್ನು ನಿಪಿ –33 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–33(ಎ) ಎಂದು ಗುರುತಿಸಲಾಯಿತು .

ದಿಃ 18.08.2020 ರಂದು ತನಿಖಾಧಿಕಾರಿಯವರು ನನ್ನನ್ನು ಕಣಿವೆ ಜೋಗಿಹಳ್ಳಿಗೆ ಕರೆದುಕೊಂಡು ಹೋಗಿದ್ದು ಅಲ್ಲಿ ಪರಮೇಶ್ವರಪ್ಪರವರ ಮನೆ ಮುಂದೆ ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡುವಾಗ ಪಂಚರನ್ನುಒಳಗೊಂಡಂತೆ ಫೋಟೋ ತೆಗೆಯಲು ಸೂಚನೆ ನೀಡಿದ್ದು ಅದರಂತೆ ಫೋಟೋ ತೆಗೆದಿರುತ್ತೇನೆ . ಸಾಕ್ಷಿ ಸದರಿ ಫೋಟೋ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–13, 14 ಎಂದು ಗುರುತಿಸಲಾಗಿದೆ . ಈ ಬಗ್ಗೆ ವರದಿ ನೀಡಿರುತ್ತೇನೆ . ಸಾಕ್ಷಿ ಸದರಿ ವರದಿ ನೋಡಿ ತನ್ನ ಸಹಿ ಗುರುತಿಸಿದ್ದು ಅದನ್ನು ನಿಪಿ –34 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–34(ಎ) ಎಂದು ಗುರುತಿಸಲಾಯಿತು .

**– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

ನಾನು ತಾಂತ್ರಿಕ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ . ನಮ್ಮ ಇಲಾಖೆಯ ಕ್ಯಾಮಾರಾ ಸೋನಿ ಡಿಜಿಟಲ್ ಇರುತ್ತದೆ . ಸದರಿ ಕ್ಯಾಮಾರಾದಲ್ಲಿ ಸೆಟಿಂಗ್ಸ್ ಇರುತ್ತದೆ ಎಂದರೆ ಸರಿ . ಸದರಿ ಕ್ಯಾಮಾರಾ ದಲ್ಲಿ ಫೋಟೋ ತೆಗೆದರೆ ಫೋಟೋದಲ್ಲಿ ದಿನಾಂಕ ಮತ್ತು ಸಮಯ ಬರುತ್ತದೆ ಎಂದರೆ ಸರಿಯಲ್ಲ. ಖಾಸಗಿ ಲ್ಯಾಬ್ ದಲ್ಲಿ ಪ್ರಿಂಟ್ ಮಾಡಿಸಿದ್ದು ಬಿಲ್ ನ್ನು ತನಿಖಾಧಿಕಾರಿಯವರಿಗೆ ನೀಡಿಲ್ಲ . ಕೃತ್ಯ ನಡೆದ ಸ್ಥಳದಲ್ಲಿ ತನಿಖಾಧಿಕಾರಿ ಮಹಜರ್ ಮಾಡಿದ್ದು ಸದರಿ ಮಹಜರ್ ಗೆ ನನ್ನ ಸಹಿ ಪಡೆದಿಲ್ಲ . ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ ಮತ್ತು ನಾನು ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ–34 ರಲ್ಲಿ ಯಾವ ಕ್ಯಾಮಾರದಿಂದ ಫೋಟೋ

ತೆಗೆದಿದ್ದೇನೆ ಎಂದು ಬರೆದಿಲ್ಲ ಎಂದರೆ ಸರಿ . ನಾನು ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.